ಕಿರಿಯ ಅಭಿಯಂತರರನ್ನು ರೆಗ್ಯುಲರೈಸ್ ಮಾಡುವ ಬಗ್ಗೆ

೯೭ (೩೦೮) ಶ್ರೀ ಪೆಗ್ಡೆ ಆಜ್ಜೀಬಾಳ್ ಜಿ. ಎಸ್.(ಅಂಕೋಲಾ).—ಮಾನ್ಯ ಗ್ರಾಮೀಣ ಅಭಿವೃದ್ಧಿ ವಸತಿ ಮತ್ತು ಪಕ್ಷ್ಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

೧) ರಾಜ್ಯದ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಕಿರಿಯ ಅಭಿಯಂತರರನ್ನು ಸರ್ಕಾರ ರೆಗ್ಯುಲರೈಜ್ ಮಾಡುವರೇ?

೨) ಹಾಗಿದ್ದರೆ ಯಾವಾಗ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ, ವಸತಿ ಮತ್ತು ಪಕ್ಷ್ಣ ಮಂತ್ರಿಗಳು).—

೧) ಅಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ.

೨) ಪ್ರಶ್ನೆ ಉದ್ಭವಿಸುವುದಿಲ್ಲ.

ಮೈಸೂರು ನಗರದ ಕೆಲವು ಪ್ರದೇಶಗಳಲ್ಲಿ ಕುಡಿಯುವ ನೀರಿನ ಕೊರತೆಯ ಬಗ್ಗೆ

೯೮ (೨೪೦) ಶ್ರೀಮತಿ ಮುಕ್ತಾರುನ್ನೀಸಾ (ನರಸಿಂಪರಾಜ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಮೈಸೂರು ನಗರದ ಕೆಲವು ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಪ್ರದೇಶಗಳಿಗೆ ಕುಡಿಯುವ ನೀರನ್ನು ತ್ವರಿತವಾಗಿ ಒದಗಿಸಲು ಸರ್ಕಾರವು ತೆಗೆದು ಕೊಂಡಿರುವ ಕ್ರಮಗಳೇನು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಬಂದಿದೆ.

ಆ) ೧. ಕರ್ನಾಟಕ ಗೃಹ ನಿರ್ಮಾಣ ಮಂಡಳಿ, ನಗರ ವಿಶ್ವಸ್ಥ ಮಂಡಳಿ ಹಾಗೂ ಮೈಸೂರು ಮಹಾನಗರ ಪಾಲಿಕೆಯವರು ನಿರ್ಮಾಣ ಮಾಡುವ ಹೊಸ ಬಡಾವಣೆಗಳಿಗೆ ಕಾವೇರಿ ನದಿಯ ನೀರನ್ನು ಅಥವಾ ಕೊಳವೆ ಬಾವಿಗಳನ್ನು ಕೊರೆದು ಮತ್ತು ವಿತರಣಾ ವ್ಯವಸ್ಥೆಯನ್ನು ಒದಗಿಸಿ ತೇವಣಿ ಕೊಡುಗೆಯ ಕಾರ್ಯಗಳಾಗಿ ಕರ್ನಾಟಕ ಜಲ ಮಂಡಳಿಯು ನೀರನ್ನು ಪೂರೈಸುತ್ತಿದೆ. ಇದರ ಜೊತೆಗೆ ಅಭಾವ ಪರಿಹಾರ ಕಾಮಗಾರಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ನಗರದ ಹಳೆಯ ಪ್ರದೇಶಗಳಲ್ಲಿ ನಗರ ಪಾಲಿಕೆಯ ಕೋರಿಕೆಯ ಮೇರೆಗೆ ಕೊಳವೆ ಮಾರ್ಗಗಳನ್ನು ತೇವಣಿ ಕೊಡುಗೆಯ ಕಾರ್ಯವಾಗಿ ಹಾಕಲಾಗುತ್ತಿದೆ.

ಮೈಸೂರು ನಗರದ ಎರಡನೇ ಮತ್ತು ಮೂರನೆಯ ಹಂತದ ನೀರು ಸರಬರಾಜು ವ್ಯವಸ್ಥೆಗಳಿಗೆ ಸಂಪರ್ಕ ಕಲ್ಪಿಸಲು ೨೯.೪೦ ಲಕ್ಷ ರೂ.ಗಳ ಯೋಜನೆ ತಯಾರಾಗಿದ್ದು ಇದನ್ನು ಮಹಾನಗರ ಪಾಲಿಕೆಯಿಂದ ತೇವಣಿ ಹಣ ಪಡೆದು ಕಾರ್ಯಗತ ಮಾಡಲಾಗುತ್ತಿದೆ. ಈ ಯೋಜನೆ ಪೂರ್ಣಗೊಂಡಾಗ ಹಲವು ಪ್ರದೇಶಗಳಲ್ಲಿ ನೀರು ಸರಬರಾಜು ಉತ್ತಮಗೊಳ್ಳುವುದು.

೨. ಮೈಸೂರು ನಗರದ ವಿತರಣಾ ವ್ಯವಸ್ಥೆಯನ್ನು ಪುನರ್ ರೂಪಿಸಲು ಒಂದು ಸಮಗ್ರ ಯೋಜನೆಯನ್ನು ೧೯೮೦–೮೧ರ ದರ ಪಟ್ಟಿಯ ಆಧಾರದ ಮೇಲೆ ೮.೫ ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ತಯಾರಿಸಲಾಗಿದ್ದು, ಈ ಯೋಜನೆಯನ್ನು ೭ನೇ ಪಂಚ ವಾರ್ಷಿಕ ಯೋಜನೆಯ ಕಾರ್ಯಕ್ರಮದಲ್ಲಿ ಸೇರಿಸಲಾಗಿದೆ.